# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1065 |
| ಸದಸ್ಯರ ಹೆಸರು | : | ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 20.08.2025 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯಾದ್ಯಂತ ಕಳೆದ ಕೆಲವು ದಿನಗಳಲ್ಲಿ ರೈತರ ಹೆಸರಿನಲ್ಲಿದ್ದ ಪಹಣಿಯಲ್ಲಿ ವಕ್ಫ್ ಎಂದು ನಮೂದಿಸಲಾಗಿದ್ದು, ಇದರ ಬಗ್ಗೆ ಸರ್ಕಾರದ ನಿಲುವೇನು; | ಸರ್ಕಾರದ ಪತ್ರ ಸಂಖ್ಯೆ:ಕಂಇ 99 ಟಿಆರ್ಎಂ 2024, ದಿನಾಂಕ:09.11.2024ರಲ್ಲಿ ಈಗಾಗಲೇ ನೀಡಿರುವ ನೋಟಿಸ್‌ಗಳನ್ನು ಹಿಂದಕ್ಕೆ ಪಡೆಯುವ ಕುರಿತಂತೆ ಎಲ್ಲಾ ಪ್ರಾದೇಶಿಕ ಆಯುಕ್ತರುಗಳು ಹಾಗೂ ಜಿಲ್ಲಾಧಿಕಾರಿಗಳಿಗೆ ಈ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿರುತ್ತದೆ:<br>1. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮ್ಯುಟೇಷನ್ ಮಾಡಲು ಯಾವುದೇ ಕಛೇರಿ ಅಥವಾ ಯಾವುದೇ ಪ್ರಾಧಿಕಾರದಿಂದ ನೀಡಲಾದ ನಿರ್ದೇಶನಗಳನ್ನು ತಕ್ಷಣದಿಂದಲೇ ಹಿಂಪಡೆಯುವುದು ಹಾಗೂ ಮ್ಯುಟೇಷನ್ ಪ್ರಕ್ರಿಯೆಯನ್ನು ಕೂಡಲೇ ಸ್ಥಗಿತಗೊಳಿಸುವುದು;<br>2. ಈ ಕುರಿತು ನೀಡಲಾದ ಎಲ್ಲಾ ನೋಟೀಸುಗಳನ್ನು ಹಿಂಪಡೆಯುವುದು;<br>3. ಸದರಿ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿರುವ ರೈತರುಗಳ ವಿರುದ್ಧ ಯಾವುದೇ ಕ್ರಮವನ್ನು ಜರುಗಿಸತಕ್ಕದಲ್ಲ. |
| (ಆ) | ರಾಜ್ಯಾದ್ಯಂತ ಇದರಿಂದ ರೈತರಲ್ಲಿ ಆಕ್ರೋಶ ಬುಗಿಲೆದ್ದು, ಮಾನ್ಯ ಮುಖ್ಯಮಂತ್ರಿಗಳು ಇದನ್ನು ಸರಿಪಡಿಸುವುದಾಗಿ ಮತ್ತು ಕೈಬಿಡಲಾಗುವುದು ಎಂದು ತಿಳಿಸಲಾಗಿದ್ದು, ಬದಲಾವಣೆಯಾದ ಪಹಣಿಯಲ್ಲಿ ರೈತರ ಹೆಸರು ನಮೂದಿಸಲಾಗಿದೆಯೇ; (ವಿವರ ಒದಗಿಸುವುದು) | |
| (ಇ) | ರಾಜ್ಯದಲ್ಲಿ ಒಟ್ಟು ಎಷ್ಟು ರೈತರ ಭೂಮಿ ಈ ರೀತಿಯಾಗಿ ವಕ್ಫ್ ಹೆಸರಿನಲ್ಲಿ ಪಹಣಿ ಬದಲಾವಣೆಯಾಗಿತ್ತು; (ಜಿಲ್ಲಾವಾರು ರೈತರ ವಿವರ ನೀಡುವುದು) | ರಾಜ್ಯದಲ್ಲಿ ವಕ್ಫ್ ಹೆಸರಿನಲ್ಲಿ ಪಹಣಿ ನಮೂದಿಸಿರುವ ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ಹಾಗೂ ವಕ್ಫ್ ಹೆಸರಿನಲ್ಲಿ ನಮೂದಿಸಲಾಗಿದ್ದ ಪಹಣಿಯನ್ನು ಪುನಃ ರೈತರ ಹೆಸರಿಗೆ ಬದಲಾವಣೆಯಾದ ಜಿಲ್ಲಾವಾರು ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| (ಈ) | ಸದರಿ ಬದಲಾವಣೆಯಾದ ಪಹಣಿಯಲ್ಲಿ ಮತ್ತೆ ರೈತರ ಹೆಸರಿಗೆ ಎಷ್ಟು ಜಮೀನು ತಿದ್ದುಪಡಿಯಾಗಿದೆ; (ಜಿಲ್ಲಾವಾರು ರೈತರ ವಿವರ ನೀಡುವುದು) | |
| (ಉ) | ರೈತರ ಭೂಮಿಯನ್ನು ವಕ್ಫ್ ಹೆಸರಿನಲ್ಲಿ ಪಹಣಿಯನ್ನಾಗಿ ಮಾಡಲು ಯಾವ ಮಾನದಂಡಗಳಿವೆ; ಈ ರೀತಿಯಾಗಿ ಮಾಡಿರುವುದು ಎಷ್ಟು ಸರಿ; ಇದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ವಿವರ ಒದಗಿಸುವುದು) | ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದಂತೆ ಸರ್ಕಾರದ ಅಧಿಸೂಚನೆಗಳು, ಮಾನ್ಯ ನ್ಯಾಯಾಲಯಗಳ ಆದೇಶಗಳು ಹಾಗೂ ಇತರೆ ಅಗತ್ಯ ದಾಖಲೆಗಳೊಂದಿಗೆ ಉಪ ವಿಭಾಗಾಧಿಕಾರಿಗಳು ಅಥವಾ ಜಿಲ್ಲಾಧಿಕಾರಿಗಳ ಆದೇಶ ಪಡೆದು ಖಾತೆ ದಾಖಲಿಸಿಕೊಳ್ಳಬಹುದಾಗಿದೆ.<br><br>ಈ ರೀತಿಯ ಪ್ರಕರಣಗಳನ್ನು ಹೊರತುಪಡಿಸಿ ರೈತರ ಜಮೀನಿನ ಪಹಣಿಗಳಲ್ಲಿ ವಕ್ಫ್ ಆಸ್ತಿ ನಮೂದು ಮಾಡಲು ನೋಟೀಸ್‌ಗಳನ್ನು ನೀಡಿದ್ದಲ್ಲಿ ಅವುಗಳನ್ನು ಹಿಂಪಡೆಯುವ ಕುರಿತಂತೆ ಸರ್ಕಾರದ ಪತ್ರ ಸಂಖ್ಯೆ:ಕಂಇ 99 ಟಿಆರ್ಎಂ 2024, ದಿನಾಂಕ:09.11.2024ರಲ್ಲಿ ನಿರ್ದೇಶನಗಳನ್ನು ನೀಡಲಾಗಿರುತ್ತದೆ. |

**ಸಂ:ಕಂಇ 143 ಟಿಆರ್ಎಂ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

## ಅನುಬಂಧ - 1

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1065ರ ಉಪ ಪ್ರಶ್ನೆ (ಇ) ಗೆ ವಿವರ**

**(ವಕ್ಪ್ ಹೆಸರಿನಲ್ಲಿ ಪಹಣಿ ನಮೂದಿಸಿರುವ ವಿವರ)**

| ಕ್ರ. ಸಂ | ಜಿಲ್ಲೆ | ಪಹಣಿ ಕಾಲಂ 9ರಲ್ಲಿ ವಕ್ಫ್ ಎಂದು ನಮೂದಿಸಿರುವ ಸಂಖ್ಯೆ | ಪಹಣಿ ಕಾಲಂ 11ರಲ್ಲಿ ವಕ್ಫ್ ಎಂದು ನಮೂದಿಸಿರುವ ಸಂಖ್ಯೆ | ಷರಾ |
|---|---|---|---|---|
| 1 | ಬೆಂಗಳೂರು ನಗರ | 0 | 38 | ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಅಧೀನ ಕಛೇರಿಗಳಿಂದ ಮಾಹಿತಿ ಪಡೆಯಲಾಗಿದ್ದು ಕರ್ನಾಟಕ ರಾಜ್ಯ ಪತ್ರದಲ್ಲಿ ಗುರುತಿಸಿರುವ ಸರ್ವೆ ನಂ ಗಳ ಜಮೀನಿನ ಪಹಣಿ ಕಾಲಂ 11 ರಲ್ಲಿ ವಕ್ಫ್ ಆಸ್ತಿ ಎಂದು ಬಹುತೇಕ ತಾಲ್ಲೂಕುಗಳಲ್ಲಿ ಇಂಡೀಕರಣಗೊಳಿಸಿರುವುದು ವಕ್ಫ್ ಸಂಸ್ಥೆ ಮತ್ತು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕಾಲಂ 11 ರಲ್ಲಿ ವಕ್ಫ್ ಆಸ್ತಿ ಎಂದು ನಮೂದಿಸಿರುವ ಬೆಂಗಳೂರು ಉತ್ತರ ತಾಲ್ಲೂಕು ಮತ್ತು ಯಲಹಂಕ ತಾಲ್ಲೂಕುಗಳ ವಿವರ. |
| 2 | ಕಲಬುರಗಿ | 0 | 1096 | ಕಲಬುರಗಿ ಜಿಲ್ಲೆಯಲ್ಲಿ ತಾಲ್ಲೂಕುವಾರು ರೈತರ ಭೂಮಿಗೆ ವಕ್ಫ್ ಹೆಸರಿನಲ್ಲಿ ಕಾಲಂ ನಂ 11 ರಲ್ಲಿ ಬದಲಾವಣೆಯಾದ ವಿವರ. |
| 3 | ಬಳ್ಳಾರಿ | 1 | 33 | ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ ಒಟ್ಟು 33 ರೈತರ ಜಮೀನಿನ ಪಹಣಿ ಕಾಲಂ 11(ಋಣ) ಕಾಲಂ 9 ರಲ್ಲಿ ರೈತರ ಹೆಸರು ನಮೂದಾಗಿರುತ್ತದೆ. ಯಾವುದೇ ರೈತರ ಹಕ್ಕು ಬದಲಾವಣೆ ಆಗಿರುವುದಿಲ್ಲ. ಸಂಡೂರು ತಾಲ್ಲೂಕಿನ 01 ರೈತರ ಜಮೀನಿನ ಪಹಣಿ ಕಾಲಂ 9 ರಲ್ಲಿ ಕೋರ್ಟ್ ಆದೇಶದಂತೆ ವಕ್ಫ್ ಆಸ್ತಿ ಎಂದು ಇಂಡೀಕರಣಗೊಳಿಸಿದೆ. |
| 4 | ಬೀದರ್ | 301 | | 301 ಪಹಣಿಗಳು ರೈತರ ಹೆಸರಿನಲ್ಲಿಯೇ ಇದ್ದು, ವಕ್ಫ್ ಎಂಬುವುದನ್ನು ಜಂಟಿಯಾಗಿರುವುದನ್ನು ಕೈಬಿಡಲಾಗಿದೆ. ಪಹಣಿಗಳಲ್ಲಿ ಕಾಣುವ ಒಟ್ಟು ವಿಸ್ತೀರ್ಣವು ರೈತರ ಹೆಸರಿಗೆ ತಿದ್ದುಪಡಿಯಾಗಿದೆ. |
| 5 | ಕೊಪ್ಪಳ | 0 | 183 | ಜಿಲ್ಲೆಯಲ್ಲಿ ರೈತರ ಭೂಮಿಯನ್ನು ವಕ್ಫ್ ಹೆಸರಿನಲ್ಲಿ ಪಹಣಿ ಬದಲಾವಣೆ ಆಗಿರುವುದಿಲ್ಲ. ಆದರೆ ಮಾನ್ಯ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ರವರ ಪತ್ರ ಸಂಖ್ಯೆ/ ಕಂಪ್ರಾಆಕ/ ವಕ್ಫ್/34/2021-22 ದಿನಾಂಕ: 02-08-2017 ಮತ್ತು ಮಾನ್ಯ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ರವರ ಪತ್ರ ಸಂಖ್ಯೆ ಕಂಪ್ರಾಆಕ/ ವಕ್ಫ್/25/2021-22, ದಿನಾಂಕ:02-03-2022 ರನ್ವಯ 183 ರೈತರ ಪಹಣಿ ಕಾಲಂ 11 ರಲ್ಲಿ ವಕ್ಫ್ ಎಂದು ನಮೂದಿಸಲಾಗಿರುತ್ತದೆ. |
| 6 | ರಾಯಚೂರು | 0 | 1061 | |

| ಕ್ರ. ಸಂ | ಜಿಲ್ಲೆ | ಪಹಣಿ ಕಾಲಂ 9ರಲ್ಲಿ ವಕ್ಫ್ ಎಂದು ನಮೂದಿಸಿರುವ ಸಂಖ್ಯೆ | ಪಹಣಿ ಕಾಲಂ 11ರಲ್ಲಿ ವಕ್ಫ್ ಎಂದು ನಮೂದಿಸಿರುವ ಸಂಖ್ಯೆ | ಷರಾ |
|---|---|---|---|---|
| 7 | ಯಾದಗಿರಿ | 0 | 331 | ಕರ್ನಾಟಕ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ 200863/2025ರ ನಿರ್ದೇಶನದ ಮೇರೆಗೆ ಯಾದಗಿರಿ ಜಿಲ್ಲೆಯ 331 ರೈತರ ಪಹಣಿ ಕಲಂ 11 ರಲ್ಲಿ ನಮೂದಾಗಿದ್ದ ವಕ್ಫ್/ವಕ್ಫ್ ಆಸ್ತಿ/ ಕರ್ನಾಟಕ ವಕ್ಫ್ ಮಂಡಳಿ ಬೆಂಗಳೂರು ಎಂಬ ವಕ್ಫ್ ಸಂಬಂಧಿತ ಷರಾಗಳನ್ನು ಪಹಣಿ ಕಾಲಂ 11 ರಲ್ಲಿ ತೆಗೆದು ಹಾಕಲಾಗಿರುತ್ತದೆ. |
| 8 | ಬೆಳಗಾವಿ | 0 | 1120 | ಜಿಲ್ಲೆಯಲ್ಲಿ ಒಟ್ಟು 1120 ರೈತರ ಪಹಣಿಯ ಕಾಲಂ ನಂ 11ರಲ್ಲಿ ವಕ್ಫ್ ಎಂದು ನಮೂದಿಸಲಾಗಿದೆ. |
| 9 | ಧಾರವಾಡ | 8 | 0 | ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿನಲ್ಲಿ ಮಾತ್ರ ಎಂಟು ಜನ ರೈತರ ಭೂಮಿ ಈ ರೀತಿಯಾಗಿ ವಕ್ಫ್ ಹೆಸರಿನಲ್ಲಿ ಪಹಣಿ ಬದಲಾವಣೆಯಾಗಿರುತ್ತದೆ. |
| | **ಒಟ್ಟು** | **310** | **3862** | |

ಅನುಬಂಧ - 2

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1065ರ ಉಪ ಪ್ರಶ್ನೆ (ಈ) ಗೆ ವಿವರ**

**(ವಕ್ಫ್ ಹೆಸರಿನಲ್ಲಿ ನಮೂದಿದ್ದ ಪಹಣಿ ಪುನಃ ರೈತರ ಹೆಸರಿಗೆ ಬದಲಾವಣೆಯಾದ ವಿವರ)**

| ಕ್ರ. ಸಂ | ಜಿಲ್ಲೆ | ಪಹಣಿ ಕಾಲಂ 9 ರಲ್ಲಿ ವಕ್ಫ್ ಎಂದು ನಮೂದು ತೆಗೆದು ರೈತರ ಹೆಸರು ನಮೂದಿಸಿರುವ ಸಂಖ್ಯೆ | ಪಹಣಿ ಕಾಲಂ 11ರಲ್ಲಿ ವಕ್ಫ್ ಎಂದು ನಮೂದು ತೆಗೆದು ರೈತರ ಹೆಸರು ನಮೂದಿಸಿರುವ ಸಂಖ್ಯೆ | ಷರಾ |
|---|---|---|---|---|
| 1 | ಬೆಂಗಳೂರು ನಗರ | 0 | 0 | ಬೆಂಗಳೂರು ನಗರ ಜಿಲ್ಲೆಯಲ್ಲಿ ಈಗಾಗಲೇ ಆರ್‌ಟಿಸಿ ಕಾಲಂ 11 ರಲ್ಲಿ ವಕ್ಫ್ ಆಸ್ತಿ ಎಂದು ಈಗಾಗಲೇ ಇಂಡೀಕರಣಗೊಳಿಸಿರುವ ಪಹಣಿಯಲ್ಲಿ ರೈತರ ಹೆಸರನ್ನು ಇಂಡೀಕರಿಸಿರುವುದಿಲ್ಲ. |
| 2 | ಕಲಬುರಗಿ | 0 | 1096 | ಕಲಬುರಗಿ ಜಿಲ್ಲೆಯಲ್ಲಿ ತಾಲ್ಲೂಕುವಾರು ರೈತರ ಭೂಮಿಗೆ ವಕ್ಫ್ ಹೆಸರಿನಲ್ಲಿ ಕಾಲಂ ನಂ 11 ರಲ್ಲಿ ಬದಲಾವಣೆಯಾದ ವಿವರ. |
| 3 | ಬಳ್ಳಾರಿ | 0 | 0 | ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಪಹಣಿಯಲ್ಲಿ ಯಾವುದೇ ಬದಲಾವಣೆ ಮಾಡಿರುವುದಿಲ್ಲ. |
| 4 | ಬೀದರ್ | 301 | 0 | 301 ಪಹಣಿಗಳು ರೈತರ ಹೆಸರಿನಲ್ಲಿಯೇ ಇದ್ದು, ವಕ್ಫ್ ಎಂಬುವುದನ್ನು ಜಂಟಿಯಾಗಿರುವುದನ್ನು ಕೈಬಿಡಲಾಗಿದೆ. ಪಹಣಿಗಳಲ್ಲಿ ಕಾಣುವ ಒಟ್ಟು ವಿಸ್ತೀರ್ಣವು ರೈತರ ಹೆಸರಿಗೆ ತಿದ್ದುಪಡಿಯಾಗಿದೆ. |
| 5 | ಕೊಪ್ಪಳ | 0 | 17 | ಜಿಲ್ಲೆಯಲ್ಲಿ ಮಾನ್ಯ ನ್ಯಾಯಾಲಯದ ಆದೇಶದನ್ವಯ 17 ಪ್ರಕರಣಗಳಲ್ಲಿ ರೈತರ ಪಹಣಿ ಪತ್ರಿಕೆಯಲ್ಲಿ ವಕ್ಫ್ ಎಂಬ ಪದವನ್ನು ಕಡಿಮೆ ಮಾಡಲಾಗಿರುತ್ತದೆ. |
| 6 | ರಾಯಚೂರು | 0 | 1061 | ರಾಯಚೂರು ಜಿಲ್ಲೆಯಲ್ಲಿ ತಾಲ್ಲೂಕುವಾರು ರೈತರ ಭೂಮಿ ವಕ್ಫ್ ಹೆಸರಿನಲ್ಲಿ ಪಹಣಿ ಕಾಲಂ ನಂ 11 ರಲ್ಲಿ ವಕ್ಫ್ ಎಂದು ನಮೂದಾಗಿದ್ದನ್ನು ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ವಕ್ಫ್ ಎಂಬ ಪದವನ್ನು ಪಹಣಿ ಕಾಲಂ ನಂ 11 ರಿಂದ ತೆಗೆದು ತಿದ್ದುಪಡಿಯಾಗಿದೆ. |
| 7 | ಯಾದಗಿರಿ | 0 | 331 | ಕರ್ನಾಟಕ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ 200863/2025ರ ನಿರ್ದೇಶನದ ಮೇರೆಗೆ ಯಾದಗಿರಿ ಜಿಲ್ಲೆಯ 331 ರೈತರ ಪಹಣಿ ಕಲಂ 11 ರಲ್ಲಿ ನಮೂದಾಗಿದ್ದ ವಕ್ಫ್/ವಕ್ಫ್ ಆಸ್ತಿ/ ಕರ್ನಾಟಕ ವಕ್ಫ್ ಮಂಡಳಿ ಬೆಂಗಳೂರು ಎಂಬ ವಕ್ಫ್ ಸಂಬಂಧಿತ ಷರಾಗಳನ್ನು ಪಹಣಿ ಕಾಲಂ 11 ರಲ್ಲಿ ತೆಗೆದು ಹಾಕಲಾಗಿರುತ್ತದೆ. |
| 8 | ಬೆಳಗಾವಿ | 0 | 0 | ಯಾವುದೇ ಬದಲಾವಣೆ ಮಾಡಿರುವುದಿಲ್ಲ. |
| 9 | ಧಾರವಾಡ | 8 | 0 | ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿನಲ್ಲಿ ಮಾತ್ರ ವಕ್ಫ್ ಎಂದು ಬದಲಾವಣೆಯಾದ ಪಹಣಿಯಲ್ಲಿ ಮತ್ತೆ ಎಂಟು ಜನ ರೈತರ ಜಮೀನುಗಳಿಗೆ ತಿದ್ದುಪಡಿಯಾಗಿರುತ್ತದೆ. |
| | **ಒಟ್ಟು** | **309** | **2505** | |